MANGALORE MARKET REPORTS
MMR MEDIA Since 1975
REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 30-8-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಜೋಳ ದರ ಇಳಿಕೆ

ಪೌಲ್ಟ್ರಿ ವಲಯದ ಬೇಡಿಕೆ ಇಳಿಕೆ ಹಾಗೂ ಆವಕ ಹೆಚ್ಚಳದಿಂದ ಬಿಹಾರದ ಪೂರ್ನಿಯಾ ಮಾರುಕಟ್ಟೆಯಲ್ಲಿ ಜೋಳ ದರ ಇಳಿಕೆಯಾಗಿದೆ. ಕರ್ನಾಟಕದ ದಾವಣಗೆರೆಯಲ್ಲಿ ದರ ಸ್ಥಿರವಾಗಿದೆ. ಗೋಧಿ ಹಾಗೂ ಗೋಧಿ ಉತ್ಪನ್ನಗಳ ದರ ಹೆಚ್ಚಳವಾಗಿದೆ.

## ಅಕ್ಕಿ ದೇಶೀ ಹಾಗೂ ರಫ್ತು ದರ ಹೆಚ್ಚಳ

ಖಾರೀಫ್ ಬೆಳೆಯಲ್ಲಿ ಅಕ್ಕಿಯ ಉತ್ಪಾದನೆ ಇಳಿಕೆಯ ಕಳವಳದಿಂದ ಅಕ್ಕಿಯ ದೇಶೀ ಹಾಗೂ ರಫ್ತು ದರಗಳ ಹಿಂದಿನ ವಾರ ಹೆಚ್ಚಳಗೊಂಡಿದೆಯೆನ್ನಲಾಗಿದೆ. ಭಾರತ ಜಾಗತಿಕ ಅಕ್ಕಿ ವ್ಯವಹಾರದ 40 ಶೇಕಡಾ ಪಾಲು ಹೊಂದಿದೆ. ಉತ್ಪಾದನೆ ಇಳಿಕೆಯಾದರೂ ದೇಶೀ ಬಳಕೆಗಿಂತ ಮಿಗತೆಯಾಗಿ ರಫ್ತು ಮಾಡಲು ಸಾಧ್ಯವಾಗುವಷ್ಟು ಉತ್ಪಾದನೆಯಾಗಲಿದೆಯೆಂದು USDA ಯು ವರದಿ ಪ್ರಕಟಿಸಿದೆಯೆನ್ನಲಾಗಿದೆ. ಸರಕಾರ ರಫ್ತಿನ ಮೇಲೆ ನಿಗಾವಹಿಸುವುದರಿಂದ ದರ ನಿಯಂತ್ರಿಸುವ ಸಾಧ್ಯತೆಗಳಿವೆ.

## ಚಿಕಾಗೋ ಜೋಳ ದರ 2 ತಿಂಗಳ ಗರಿಷ್ಠ ಮಟ್ಟಕ್ಕೆ ಹೆಚ್ಚಳ

24-8-2022 ರಂದು ಚಿಕಾಗೋ ಮಾರುಕಟ್ಟೆಯಲ್ಲಿ ಜೋಳ ದರ ಹಿಂದಿನ 2 ತಿಂಗಳ ಗರಿಷ್ಠ ಮಟ್ಟಕ್ಕೆ ಹೆಚ್ಚಳ ಕಂಡಿದ್ದು ಹವಾಮಾನ ವೈಪರೀತ್ಯದಿಂದ ಉತ್ಪಾದನೆ ಇಳಿಕೆಯ ಭೀತಿಯಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಚೀನಾದಲ್ಲಿ ಒಣಹವೆಯಿಂದ ಅಲ್ಲಿ ಉತ್ಪಾದನೆ ಇಳಿಕೆಯೂ ಅಲ್ಲಿಂದ ಬೇಡಿಕೆ ಹೆಚ್ಚಳವಾಗುವ ನಿರೀಕ್ಷೆಯಿದೆಯೆನ್ನಲಾಗಿದೆ. ಚೀನಾದ ಒಣ, ಬಿಸಿ ಹವಾಮಾನ ಇನ್ನೂ ಮುಂದುವರಿದಲ್ಲಿ ಧಾನ್ಯ ಮತ್ತು ಎಣ್ಣೆಗಳ ಬೇಡಿಕೆ ಚೀನಾದಲ್ಲಿ ಹೆಚ್ಚಳವಾಗಿ ಅಲ್ಲಿನ ಆಮದು ಹೆಚ್ಚಳವಾಗುವ ಹೆಚ್ಚಿನ ಸಾಧ್ಯತೆಗಳಿವೆಯೆನ್ನಲಾಗಿದೆ.

## ಖಾರೀಫ್ 2022 ಸೀಸನ್‌ನ ದೇಶದ ಬಿತ್ತನೆ ಒಟ್ಟು 2.5 ಶೇಕಡಾ ಹಿನ್ನಡೆ

ಆಗಸ್ಟ್ 18,2022 ರ ತನಕ ದೇಶದ ಖಾರೀಫ್ ಬಿತ್ತನೆ ಹಿಂದಿನ ಸೀಸನ್‌ಗಿಂತ 2.5 ಶೇಕಡಾ ಹಿನ್ನಡೆಯಲ್ಲಿದೆಯೆನ್ನಲಾಗಿದೆ. ಅಕ್ಕಿ 8.3 ಶೇಕಡಾ ಹಾಗೂ ಬೇಳೆಕಾಳು 5.3 ಶೇಕಡಾ ಹಿನ್ನಡೆ ಕಂಡಿದೆ. ತೊಗರಿ 7.2 ಶೇಕಡಾ ಹೆಸರುಕಾಳು 4.6 ಶೇಕಡಾ ಬಿತ್ತನೆ ಪ್ರದೇಶ ಇಳಿಕೆಯಾಗಿದೆಯೆನ್ನಲಾಗಿದೆ. ಎಣ್ಣೆ ಬೀಜಗಳ ಬಿತ್ತನೆ ಪ್ರದೇಶ 0.9 ಶೇಕಡಾ ಹಿನ್ನಡೆ, ಕಬ್ಬು ನಾಟಿ ಪ್ರದೇಶ 1.5 ಶೇಕಡಾ, ಹತ್ತಿ 6.7 ಶೇಕಡಾ ಹೆಚ್ಚಳ ದಾಖಲಿಸಿದೆಯೆನ್ನಲಾಗಿದೆ.

## ದೇಶೀ ಮಾರುಕಟ್ಟೆಯಲ್ಲಿ ಸೋಯಾಬೀನ್ ಎಣ್ಣೆ ಹಾಗೂ ಸಾಸಿವೆ ಎಣ್ಣೆ ದರ ಇಳಿಕೆ

ಪೂರೈಕೆ ಹೆಚ್ಚಳದಿಂದ ದೇಶೀ ಮಾರುಕಟ್ಟೆಯಲ್ಲಿ ಸೋಯಾಬೀನ್ ಎಣ್ಣೆ ಹಾಗೂ ಸಾಸಿವೆ ಎಣ್ಣೆ, ಸೂರ್ಯಕಾಂತಿ ಎಣ್ಣೆ ಮುಂತಾದ ಖಾದ್ಯತೈಲಗಳ ದರ ಇಳಿಕೆಯಾಗಿದೆ.

## ಪಾಮೆಣ್ಣೆ ರಫ್ತಿನ ಸ್ಥಿರವಾದ ನೀತಿ ಹೊಂದುವಂತೆ SEA ನಿಯೋಗ ಕೇಳಿಕೆ

ಪಾಮೆಣ್ಣೆ ರಫ್ತು ಮಾಡಲು ಸ್ಥಿರವಾದ ನೀತಿ ಹೊಂದುವಂತೆ SEA (ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಶನ್ ನಿಯೋಗ ಕೇಳಿಕೊಂಡಿದೆ. ಈ ಮೊದಲು ಇಂಡೋನೇಶಿಯಾದ ರಫ್ತು ನಿರ್ಬಂಧದಿಂದ ಭಾರತಕ್ಕೆ ಪಾಮೆಣ್ಣೆ ಪೂರೈಕೆಯಲ್ಲಿ ವ್ಯತ್ಯಯವಾಗಿತ್ತು. ಇಂಡೋನೇಶಿಯಾದಲ್ಲಿ ದಾಸ್ತಾನು ಹೆಚ್ಚಳವಾಗಿ ದಾಸ್ತಾನು ಸಮಸ್ಯೆಗಳಾದವು. ಇಂಡೋನೇಶಿಯಾದ ವಿದೇಶಿ ಮಾರುಕಟ್ಟೆ ಮಲೇಶ್ಯಾಗಿ ಪಾಲಾಗಿ ಈಗ ಮಾರಾಟ ಮಾಡಲು ಕಷ್ಟಪಡುವಂತಾಗಿದೆ. ಪಾಮೆಣ್ಣೆಗೆ ಪರ್ಯಾಯವಾಗಿ ಸೋಯಾಬೀನ್ ಎಣ್ಣೆ, ಸೂರ್ಯಕಾಂತಿ ಎಣ್ಣೆಯಂತಹ ಇತರ ಖಾದ್ಯತೈಲಗಳಿಗೆ ಮಾರುಕಟ್ಟೆ ಅವಕಾಶ ಹೆಚ್ಚಳವಾಯಿತು. ಹಿಂದಿನಂತೆ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಗುವುದೆಂದು ಇಂಡೋನೇಶಿಯಾದ ವಾಣಿಜ್ಯ ಮಂತ್ರಿ ಹೇಳಿದ್ದು ಸ್ಥಿರ ಆದಾಯಕರ ನೀತಿ ಹೊಂದಿದೆಯೆಂದರು. ಇಂಡೋನೇಶೀಯಾ ಹೊಂದಿರುವಂತಹ ದೇಶೀ ಮಾರಾಟ ಬದ್ಧತಾ ನೀತಿಯಿಂದ ರಫ್ತು ಮಾಡಲು ಕಷ್ಟ ಪಡಬೇಕಿದ್ದು, ಅದರಿಂದ ಅಲ್ಲಿ ದಾಸ್ತಾನು ಹೆಚ್ಚಳವಾಗುತ್ತಿದೆಯೆಂದು SEA ನಿಯೋಗ ಹೇಳಿದೆಯೆನ್ನಲಾಗಿದೆ. ಮಲೇಶ್ಯಾದ ಪಾಮೆಣ್ಣೆ ಫ್ಯೂಚರ್ ದರ ಇಳಿಕೆಯಾಗಿದೆ. ಕಾರ್ಗೋ ಸರ್ವೇಯರ್ ITS(ಇಂಟರ್‌ಟೆಕ್ ಟೆಸ್ಟಿಂಗ್ ಸರ್ವಿಸಸ್) ಪ್ರಕಾರ ಆಗಸ್ಟ್ 1-25 ರ ತನಕ ಮಲೇಶ್ಯನ್ ಪಾಮೆಣ್ಣೆ ರಫ್ತು 4.9 ಶೇಕಡಾ ಹೆಚ್ಚಳ Amper Agni ಪ್ರಕಾರ 10 ಶೇಕಡಾ ಹೆಚ್ಚಳ ಹಾಗೂ SOCIETE GENERALI DE SERVEILLENCE ಪ್ರಕಾರ 0.1 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ.